ಸಮಸ್ಯೆಗಳು ಬಂದಾಗ ಪರಿಹರಿಸಲು ಬಿಲ್ಡಿಂಗ್ ಸೊಸೈಟಿಯ ಸದಸ್ಯರ ಕಮಿಟಿ ಇತ್ತು. ಬಿಲ್ಡಿಂಗಿನ ಆ ಸೈಟು ಮೊದಲು ಒಂದು ಕುಟುಂಬಕ್ಕೆ ಸೇರಿತ್ತು. ಆ ಕುಟುಂಬದವರಿಗೆ ಒಂಬತ್ತು ಫ್ಲ್ಯಾಟುಗಳನ್ನು ಬಿಟ್ಟುಕೊಡುವ ಮತ್ತು ಬಿಲ್ಡರ್ ಉಳಿದ ಇಪ್ಪತ್ತೇಳು ಫ್ಲ್ಯಾಟುಗಳನ್ನು ಮಾರುವ ಜಂಟಿ ಉದ್ಯಮವಾಗಿತ್ತು. ಇಪ್ಪತ್ತೇಳರಲ್ಲೂ ಕೆಲವನ್ನು ಅದೇ ಕುಟುಂಬದ ಇತರ ಸಂಬಂಧಿಕರೇ ಖರೀದಿಸಿದ್ದರು. ಹಾಗಾಗಿ, ಸೈಟಿನ ಕುಟುಂಬದ ಹಲವರಿಗೆ ಅದು ಅವರದೇ ಆಸ್ತಿಯಾಗಿ ಮುಂದುವರೆದಿತ್ತು. ಬಿಲ್ಡಿಂಗ್ ಕಮಿಟಿಯಲ್ಲೂ ಅವರದ್ದೇ ಪ್ರಭಾವ. ಸೊಸೈಟಿ ರೂಪಿಸಿದ ನೀತಿ ನಿಯಮಗಳೂ ಅವರ ಇಷ್ಟಕ್ಕೆ ಸರಿಹೊಂದುತ್ತಿದ್ದವು. ಆದರೂ ಸದಸ್ಯರ ಬಹುಮತ ಹೊರಗಿನವರಿಗೇ ಇದ್ದುದರಿಂದ ಕಮಿಟಿ ಸದಸ್ಯರು ಎಚ್ಚರಿಕೆ ವಹಿಸಿ ನಡೆದುಕೊಳ್ಳುತ್ತಿದ್ದರು. ಕಮಿಟಿಯಲ್ಲಿ ತೋರಿಕೆಗೆ ಎಲ್ಲರಿಗೂ ನ್ಯಾಯ ದೊರಕಿಸಿದಂತೆ ನಿರ್ಣಯಗಳಾಗುತ್ತಿದ್ದವು. ದಾರಿಯಲ್ಲಿ ಕಸ, ಕೊಳಕು ನೀರು ಚೆಲ್ಲಿದ್ದಾರೆ. ನಡುರಾತ್ರಿವರೆಗೆ ಸದ್ದುಗದ್ದಲದ ಪಾರ್ಟಿ ನಡೆಸುತ್ತಾರೆ ಮೊದಲಾದ ಸಣ್ಣ ಸಮಸ್ಯೆಗಳಿಗೆ ಕಮಿಟಿ ಸೂಚಿಸಿದ್ದೇ ಪರಿಹಾರ. ನನ್ನ ಮಗಳು ಹೋಗುವಾಗ ಆತ ಶಿಳ್ಳೆ ಹಾಕುತ್ತಾನೆ, ಕಿಟಕಿ ಬಳಿ ನೋಡುತ್ತಿರುತ್ತಾನೆ, ನಮ್ಮ ಮನೆಗೆ ಯಾರಾದ್ರೂ ಬಂದ್ರೆ ಸಿಐಡಿ ಥರ ಇಣುಕುತ್ತಾರೆ, ಆಚೀಚೆ ಹೋಗುವಾಗೆಲ್ಲ ನಮ್ಮ ಮನೆಯ ಒಳಕ್ಕೆ ಇಣುಕಿ ಪ್ರೈವೆಸಿ ಕೆಡಿಸುತ್ತಾರೆ ಇತ್ಯಾದಿ ಸ್ವಲ್ಪ ಸೀರಿಯಸ್ ಕೇಸುಗಳು ಬಂದಾಗ ಕಮಿಟಿ ತಪ್ಪಿತಸ್ಥರಿಗೆ ವಾರ್ನಿಂಗ್ ಕೊಟ್ಟು ಕಳುಹಿಸುತ್ತಿದ್ದರು. ತಪ್ಪು ಯಾರದ್ದೆಂದು ಚರ್ಚಿಸಿಯೂ ಇತ್ಯರ್ಥವಾಗದ ಕೇಸುಗಳು ಪೊಲೀಸ್ ಸ್ಟೇಶನ್ ಅಥವಾ ಕೋರ್ಟ್ ತಲುಪಿದ್ದೂ ಇವೆ. ಘರ್ಷಣೆ, ಕಲಹ ನಡೆದು ಹೋದರೂ ಕ್ರಮೇಣ ಅದನ್ನೆಲ್ಲ ಮರೆತು ಮರಳಿ ಹಿಂದಿನಂತೆಯೇ ಬೆರೆಯುತ್ತಿರುವ ಕುಟುಂಬಗಳೇ ಹೆಚ್ಚು ಇದ್ದುದರಿಂದ ಅಲ್ಲಿಯ ಜೀವನಕ್ಕೆ ಅವರೆಲ್ಲ ಹೊಂದಿಕೊಂಡಿದ್ದರು.



ಹಲವಾರು ವರ್ಷಗಳ ಹಿಂದೆ ಜೀಕೆ ಈ ಫ್ಲ್ಯಾಟು ಬುಕ್ ಮಾಡಿದ್ದರು. ಆಗ ಜೀಕೆ ಅಲ್ಲಿಯೇ ಹತ್ತಿರದ ಕಾರ್ಖಾನೆಯಲ್ಲಿ ಉದ್ಯೋಗಿ. ಕುಂಟುತ್ತಾ ಸಾಗಿದ ಕಾಮಗಾರಿಯಿಂದಾಗಿ ನಿಗದಿಗಿಂತ ಆರು ವರ್ಷಗಳ ಬಳಿಕ ಕಟ್ಟಡ ಪೂರ್ತಿಗೊಂಡು ಫ್ಲ್ಯಾಟ್ ಕೈಗೆ ಸಿಕ್ಕಿತ್ತು. ಕೈಗೆ ಸಿಗುವಾಗ ಜೀಕೆ ಇನ್ನೇನು ನಿವೃತ್ತಿಯ ಅಂಚಿಗೆ ತಲುಪಿದ್ದರು. ಆದರೂ ತಮ್ಮದೇ ಮನೆಯೆಂಬ ಅಭಿಮಾನದೊಂದಿಗೆ ಒಡನೆಯೇ ಕುಟುಂಬದೊಂದಿಗೆ ಬಂದಿಲ್ಲಿ ನೆಲೆಸಿದ್ದರು. ಕುಟುಂಬ ಅಂದರೆ ಅವರು, ಮಡದಿ ಜಯಂತಿ ಮತ್ತು ಮಗಳು ಮಲ್ಲಿಕಾ. ಮಡದಿ ಜಯಂತಿಗೆ ಮೊದಲಿನಿಂದಲೂ ವಿಪರೀತ ಆರೋಗ್ಯ ಸಮಸ್ಯೆಗಳು.